siri-kannada.in

# (೧೨) ಅಭಯಘೋಷರೆಂಬ ಮುನಿಯ ಕಥೆ

ಅಭಯಘೋಷರೆಂಬ ಮುನಿಯ ಕಥೆಯಂ ಪೇೞ್ವೆಂ:

ಗಾಹೆ || ಕಾಕಂದಿ ಅಭಯಘೋಸೋ ವಿ ಚಂಡವೇಗೇಣ ಛಿಣ್ಣ ಸವ್ವಂಗೋ |
ತವ್ವೇದಣಮಧಿಯಾಸಿಯ ಪಡಿವಣ್ಣೋ ಉತ್ತಮಂ ಅಟ್ಠಂ ||

[ಕಾಕಂದಿ—ಕಾಕಂದಿಯೆಂಬ ಪೊೞಲೊಳ್, ಅಭಯಘೋಸೋ ವಿ—ಅಭಯ ಘೋಷರೆಂಬ ರಿಸಿಯುಂ, ಚಂಡವೇಗೇಣ—ಚಂಡವೇಗನೆಂಬೊನರಸನಿಂದಂ, ಛಿಣ್ಣ ಸವ್ವಂಗೊ—ಕೊಱೆಯೆಪಟ್ಟೆಲ್ಲಾ ಮೆಯ್ಯನೊಡೆಯನಾಗಿ, ತವ್ವೇದಣಂ—ಆ ವೇದನೆಯಂ, ಅಧಿಯಾಸಿಯ—ಲೇಸಾಗಿ ಸೈರಿಸಿ, ಪಡಿವಣ್ಣೋ—ಪೊ[1]ರ್ದಿ[1]ದೊಂ, ಉತ್ತಮ ಅಟ್ಠಂ—ಮಿಕ್ಕ ದರ್ಶನಜ್ಞಾನಚಾರಿತ್ರಂಗಳಾರಾಧನೆಯಂ]

ಅದೆಂತೆಂದೊಡೆ:

ಈ ಜಂಬೂದ್ವೀಪದ ಭರತ ಕ್ಷೇತ್ರದೊಳ್ ಮಗಧೆಯೆಂಬುದು ನಾಡಲ್ಲಿ ಕಾಕಂ[2]ದಿ[2]ಯೆಂಬುದು ಪೊೞಲದನಾಳ್ವೊನಭಯಘೋಷನೆಂಬೊರಸನಾತನ[3]ಮಹಾದೇವಿ[3] ಅಭಯಮತಿಯೆಂಬೊಳಂತವರ್ಗ್ಗಳಿಷ್ಟ ವಿಷಯ ಕಾಮಭೋಗಂಗಳನನುಭವಿಸುತ್ತಂ ಕಾಲಂ ಸಲೆ ಮತ್ತೊಂದು ದಿವಸಮರಸಂ[4]ಪೊಱಮಟ್ಟು[4] ಪೊಱವೊೞಲ ಶೋಭೆಯಂ ತೊೞಲ್ದು ನೋಡುತ್ತಿರ್ಪ್ಪನ್ನೆಗಮೊರ್ವ ಮೀಂಗುಲಿ[5]ಗ[5]ನೊಂದಾಮೆಯಂ ಬಾೞೆವಾೞೆ [6]ನಾಲ್ಕು ಕಾಲಂಕಟ್ಟಿ[6] ಬಳ್ಳಿಯಂ ಕೊರಲೊ[7]ಳ್ ತಗುಳ್ಚಿಯೆೞಲೆ ಪಿಡಿದುಕೊಂಡು ಪೊೞಲ್ಗಿದಿರಂ ಬರ್ಪ್ಪನನರಸಂ ಕಂಡು ತನ್ನ ಬಿನ್ನಣಮಂ [8]ನೆರೆದ ನೆರವಿಗೆ[8] ಮೆಱೆಯಲ್ವೇಡಿ ಗೆಂಟಱೆಂ ಚಕ್ರದಿಂ ನಾಲ್ಕು ಕಾಲುಮನೊರ್ಮೊದಲೆ ಪಱೆಯಿಟ್ಟೊಡೆ ಮೀಂಗುಲಿಗಂ ಪ್ರಾಣಮುಳ್ಳಂತಿರಾಮೆಯಂ ತನ್ನ ಮನೆಗೆ ಕೊಂಡು ಪೋದೊಡಾ ಇರುಳೊಳಾಮೆ ಪಿರಿದು ವೇದನೆಯಿಂದಂ ನಮೆದು ಸತ್ತಾ ಪೊೞಲೊಳಭಯಘೋಷ ನೃಪತಿಗಭಯಮತಿ ಮಹಾದೇವಿಗಂ ಚಂಡವೇಗನೆಂಬ ಮಗನಾಗಿ ಪುಟ್ಟಿದನಂತವರ್ಗ್ಗಳಿಷ್ಟ ವಿಷಯ ಕಾಮ ಭೋಗ ಸುಖಂಗಳನನುಭವಿಸು[9]ತ್ತಿರ್ಪನ್ನೆಗಮ್[9]

ಮತ್ತೊಂದು ದಿವಸಮರಸನುಮರಸಿಯುಂ ಕರುಮಾಡದ ಮೇಗಣ ನೆಲೆಯೊಳ್ ಭೋಗೋಪಭೋಗ ಸುಖಂಗಳನನುಭವಿಸುತ್ತಂ ವಿನೋದದಿಂದಿರ್ಪ್ಪನ್ನೆಗಂ ಚಂದ್ರ ಗ್ರಹಣಮಾದುದನರಸಂ ಕಂಡನಿತ್ಯಮಂ ಭಾವಿಸಿಯದುವೆ ವೈರಾಗ್ಯಕ್ಕೆ ಕಾರಣಮಾಗಿ ಚಂಡವೇಗನೆಂಬ ಮಗಂಗೆ ರಾಜ್ಯ[10]ಪಟ್ಟಂಗಟ್ಟಿ[10] ಬಾಹ್ಯಾಭ್ಯಂತರ ಪರಿಗ್ರಹ

---

1. ಳ್ದಿ (ಕಖಗ). 2. ಬಿ (ಖ). 3. ಭಾರ್ಯೆ (ಕಗ). 4. (ಘಚಛ)ಗಳಲ್ಲಿಲ್ಲ. 5. ಕ (ಖಘಚಛ). 6. +ಪಿಡಿದು(ಘಚಛ). 7. ಯೊಂದು ಕೈಯೊ (ಕಖಗ). 8. (ಕಖಗ) ಗಳಲ್ಲಿಲ್ಲ. 9. ತ್ತಂ ಪಲಕಾಲಂ ಸಲೆ (ಘಚಛ). 10. ಮಂ ಕೊಟ್ಟು (ಘಚಛ).

siri-kannada.in



[1]ಪರಿತ್ಯಾಗಂಗೆಯ್ದು[1] ನಂದನರೆಂಬಾಚಾರ್ಯರ ಪಕ್ಕದೆ ತಪಂಬಟ್ಟು ಪನ್ನೆರಡು ವರುಷಮ ವರೊಡನಿರ್ದ್ದೆಲ್ಲಾ ಪೋಡುಗ[2]ಳುಮಂ[2] ಕಲ್ತು ಗುರುಗಳಂ ಬೆಸಗೊಂಡವರನುಮತ ದಿಂದೇಕವಿಹಾರಿಯಾಗಿ ಗ್ರಾಮ ನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾ ಮುಖಂಗಳಂ ವಿಹಾರಿಸುತ್ತಂ ಬರ್ಪ್ಪೋರ್ ತಮ್ಮ ಮುನ್ನಿನ ಕಾಕಂದಿಯೆಂಬ ಪೊಟಲ್ಗೆ ವಂದುದ್ಯಾನವನದೊಳ್ ವೀರಾಸನು[3]ವಿ[ರ್ದೊ][3]ರನ್ನೆಗಂ ಮುನ್ನಾಮೆ ಯಪ್ಪ ಜೀವನವರ ಮಗನಪ್ಪ ಚಂಡವೇಗಂ ಕರುಮಾಡದ ಮೇಗಣ ನೆಲೆಯೊಳಿರ್ದು [4]ನೋಟಂಕ್ಕೆ ಗೆಂಟು ಪೋಗೆ[4] ಚಕ್ರಮನಿಟ್ಟೊಡಾ ಚಕ್ರಂ ವಂದು ಋಷಿಯರೆರಡು ಕೆಯ್ಯಂ ಕಾಲ್ಗಳುಮಮಂ ಮೊಕ್ಕನೆ ಪೋಗೆ ಕೊಂಡೊಡೆ ಚತುರ್ವಿಧಮಪ್ಪಾಹಾರಕ್ಕಂ ಶರೀರಕ್ಕಂ ಜಾವಜ್ಜೀವಂ ನಿವೃತ್ತಿಗೆಯ್ದು ವೇದನೆಯಂ ಸೈರಿಸಿ ಶುಭಪರಿಣಾಮದಿಂ [5]ರತ್ನತ್ರಯಮಂ[5] ಸಾಧಿಸಿ ಪದಿನಾಲ್ಕನೆಯ ಪ್ರಾಣತಮೆಂಬ ಕಲ್ಪದೊಳಿರ್ಪ[6]ತ್ತು[6] ಸಾಗರೋಪಮಾಯುಷ್ಯಮನೊಡೆಯೊನಿಂದ್ರನಾಗಿ ಪುಟ್ಟಿದೊಂ

ಮತ್ತೆ ಪೆಱರು[7]ಮಾರಾಧಕರುಂ ರತ್ನತ್ರಯಮನಾರಾಧಿಸುತ್ತಿರ್ದ[7] ಭವ್ಯರ್ಕಳ ಭಯಘೋಷ ಭಟಾರರಂ ಮನದೆ ಬಗೆದು ಪಸಿವುಂ ತೃಷ್ಣೆಯುಮೇಱುಂ ವ್ಯಾಧಿಯುಂ ಶೀತವಾತೋಷ್ಣಂಗಳುಮೆಂದಿವು ಮೊದಲಾಗೊಡೆಯ ದುಃಖಂಗಳಂ ಸೈರಿಸಿ [8]ಪರಮ ಶುದ್ಧ ಸಹಜ ದರ್ಶನ ಜ್ಞಾನ ಚಾರಿತ್ರಂಗಳಂ ಸಾಧಿಸಿ[8] ಸ್ವರ್ಗಾಪವರ್ಗ ಸುಖಂಗಳ ನೆಯ್ದುಗೆ

---

1. ಂಗಳಂ ತೊಱೆದು (ಛ). 2. ಳ್ಕ್ಮಂ (ಕಗ), ಳಂ (ಘ). 3. ಮಿಳ್ದೊ (ಕಖಗ), ದಿನಿರ್ಪ (ಘಚ), ದೊಳಿರ್ದ (ಛ). 4. ವಿನೋದದಿಂ ಗೆಂಟಱೊಳು (ಘಚ). (ಛ)ವಲ್ಲಿ ನಷ್ಟ. 5. ಮುಡಿಪಿ ಸಮ್ಯಗ್‌ದರ್ಶನಜ್ಞಾನಚಾರಿತ್ರಂಗಳಂ ಸಾದಿಸಿ (ಘಚಛ). 6. ತ್ತೆರಡು (ಛ). 7. ಂರತ್ನತ್ರಯಂ ಗಳಂ ಸಾದಿಸುತ್ತಿರ್ಪ (ಘಚಛ). 8. ಸಮಾಧಿಮರಣದಿಂ ಮುಡಿಪಿ(ಘಚಛ).